

'ಬರೀ ತತ್ತ್ವಶಾಸ್ತ್ರ ಒಂದೇ ಅಲ್ಲ. ಜೀವನವನ್ನು ಅರ್ಥ ಮಾಡಿಕೊಳ್ಳಲು ಹಲವು ಶಾಸ್ತ್ರಗಳು ನಮಗೆ ಸಹಾಯ ಮಾಡುತ್ತವೆ. ಮನೋವಿಜ್ಞಾನ, ಸಮಾಜಶಾಸ್ತ್ರ, ಮಾನವ ಜೀವನಶಾಸ್ತ್ರ, ಇತಿಹಾಸ, ನ್ಯಾಯಶಾಸ್ತ್ರ, ನ್ಯಾಯಮೀಮಾಂಸೆ ಮುಂತಾದವಂತೂ ಬಹಳ ಮುಖ್ಯವಾದುವುಗಳು. ಜೀವಶಾಸ್ತ್ರ, ಭೂಗೋಳಶಾಸ್ತ್ರ ಮೊದಲಾದುವುಗಳ ಅಲ್ಪಸ್ವಲ್ಪ ಪರಿಚಯವಾದರೂ ನಮಗೆ ಬೇಕು. ಹೀಗೆ ಹಲವು ಶಾಸ್ತ್ರಗಳ ಪರಿಚಯದಿಂದ ಪುಟಗೊಂಡ ಬುದ್ಧಿಯಿಂದ ಜೀವನವನ್ನು ಅವಲೋಕಿಸಿ, ವಿಶ್ಲೇಷಿಸಿ, ತೂಗಿ ನೋಡುವ ವಿಶಾಲದೃಷ್ಟಿಯುಳ್ಳ ಸಾಹಿತ್ಯಕೃತಿಗೆ ಸಾಹಿತ್ಯಿಕವಾಗಿ ಕೂಡ ಹೆಚ್ಚು ಮೌಲ್ಯವಿರುತ್ತದೆ. ಇವುಗಳನ್ನು ಬಿಟ್ಟು ಬರೀ ಸಾಹಿತ್ಯವನ್ನು ಮಾತ್ರ ಅಭ್ಯಾಸ ಮಾಡುವ ಲೇಖಕನು ಸ್ವತಂತ್ರವೂ ಮಹತ್ವವೂ ಆದ ಸಾಹಿತ್ಯ ಕೃತಿಯನ್ನು ನಿರ್ಮಿಸಲಾರ; ವಿಮರ್ಶಕನು ಸಾಹಿತ್ಯಕೃತಿಯ ಮೌಲ್ಯಮಾಪನ ಮಾಡುವ ದೃಷ್ಟಿಯನ್ನು ಬೆಳೆಸಿಕೊಳ್ಳಲಾರ.'

ಇದು ಬರೀ ಬರಹಗಾರರಿಗಷ್ಟೇ ಅಲ್ಲ, ಒಬ್ಬ ಓದುಗನು ಪ್ರಬುದ್ಧನೆನ್ನಿಸಿಕೊಳ್ಳಲೂ ನೆನಪಿಡಬೇಕಾದ ಅಂಶ. ಬರವಣಿಗೆಯನ್ನು ಯಾರೂ ಕಲಿಸಲಾಗುವುದಿಲ್ಲ. ಆದರೆ ನಮ್ಮ ಕಾಲದಲ್ಲೇ ಬದುಕಿ ಸಾಧನೆಯ ಹಿಮಾಲಯವೇರಿದ ಭೈರಪ್ಪನವರಿಂದ ಮತ್ತೊಬ್ಬ ಬರಹಗಾರ ಕಲಿಯಬಹುದಾದದ್ದು ಎಂದರೆ ಪ್ರಮುಖವಾಗಿ ಇದೇ. 'ಯಾನ' ಕಾದಂಬರಿಯ ಬರಹಕ್ಕೆ ತಮ್ಮ ಎಂಬತ್ತನೇ ವಯಸ್ಸಿನಲ್ಲಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಉಳಿದು, ಅಲ್ಲಿನ ವಿದ್ಯಾರ್ಥಿಗಳ ಮೆಸ್‌ನಲ್ಲಿ ಊಟ ಮಾಡಿಕೊಂಡು, ತಮ್ಮ ಅಗತ್ಯದಷ್ಟು ಏರೋಸ್ಪೇಸ್ ಎಂಜಿನಿಯರಿಂಗ್ ಮತ್ತು ಖಗೋಳ ಶಾಸ್ತ್ರವನ್ನು ಅಭ್ಯಾಸ ಮಾಡಿ ಅದರ ಹಿನ್ನೆಲೆಯಲ್ಲಿ ಒಂದು ಕಾದಂಬರಿ ಸೃಷ್ಟಿಸುವಲ್ಲಿನ ಅವರ ಅಧ್ಯಯನ, ತಾದಾತ್ಮ್ಯ, ನಿಷ್ಠೆ ಮತ್ತು ಸಮರ್ಪಣೆಗಳನ್ನು ಮಾದರಿಯಾಗಿ ತೆಗೆದುಕೊಳ್ಳಲಾಗದಿದ್ದರೆ ಅದನ್ನು ಈ ಲೋಕದ ಮತ್ಯಾರೂ ಅಷ್ಟು ಜೀವಂತ ಉದಾಹರಣೆಯಾಗಿ ಕಲಿಸಲಾರರು. ಯಾವ ಕಲೆಯೂ ತನ್ನಲ್ಲಿ ಗಂಭೀರವಾಗಿ ತೊಡಗಿಕೊಂಡವರಿಂದ ಬದುಕನ್ನೇ ಬೇಡುತ್ತದೆ. ಅದಕ್ಕೆ ಸಿದ್ಧರಾಗಿದ್ದವರಿಗಷ್ಟೇ ಈ ಬಗೆಯ ಸಾಧನೆಯು ಸಾಧ್ಯ.

ಈ ದಿನ ಭೈರಪ್ಪನವರು ಬದುಕಿಲ್ಲ ಮತ್ತು ಅವರ ಕಥೆಯನ್ನು ಪರೋಕ್ಷವಾಗಿ ನನಗೆ ಹೇಳಿದ ಅವರ ತಂಗಿ ಲಲಿತಮ್ಮನವರೂ ಇಲ್ಲ. ಭೈರಪ್ಪನವರನ್ನು ವೈಯಕ್ತಿಕವಾಗಿ ಇನ್ನೂ ಹತ್ತಿರದಿಂದ ಪರಿಚಯ ಮಾಡಿಕೊಳ್ಳಬೇಕಿತ್ತು ಎನ್ನುವ ಕೊರಗು ನನ್ನಲ್ಲಿ ಒಂದು ಕಡೆ ಉಳಿದರೂ, ಹಾಗಾಗದಿದ್ದರಿಂದಲೇ ಅವರನ್ನು ಬೇರೆ ಬಗೆಯಲ್ಲಿ ಅರಿಯಲು ಸಾಧ್ಯವಾಯಿತು ಎನ್ನುವ ಸಮಾಧಾನವೂ ಇದೆ.

ಒಂದು ದೊಡ್ಡ ಕ್ಯಾನ್‌ವಾಸಿನ ಚಿತ್ರವನ್ನು ದೂರದಿಂದ ನೋಡಿದಾಗಲೇ ಅದರ ಕಲೆಯನ್ನು ಹೆಚ್ಚು ಆಸ್ವಾದಿಸಬಹುದು ಮತ್ತು ವಸ್ತು ಸಂಬಂಧಗಳನ್ನು ಸ್ಫುಟವಾಗಿ ಅರಿಯಬಹುದು. ಹತ್ತಿರ ಹತ್ತಿರ ಹೋದಷ್ಟೂ ಗೆರೆಯೊಂದು ಗೆರೆಯಾಗದೆ, ಕಲೆ ಮತ್ತು ಅರ್ಥಗಳನ್ನು ಕೂಡಿಸುವ ಕೊಂಡಿಯಾಗದೆ, ಕಣ್ಣಗಲಕ್ಕೂ ಚೆಲ್ಲಿದ ಬಣ್ಣವಾಗಷ್ಟೇ ಉಳಿದು ಬ್ರಶ್ಶಿನ ಅರೆಕೊರೆಗಳನ್ನು ಕಣ್ಣಿಗೆ ರಾಚುತ್ತದೆ. ನನ್ನ ಜೀವಿತಾವಧಿಯಲ್ಲೇ ಬದುಕಿದ್ದ ಕುವೆಂಪು, ಬೇಂದ್ರೆ, ಮತ್ತು ಕಾರಂತರಂತೆ ಭೈರಪ್ಪನವರು ತಮ್ಮ ಸಾಹಿತ್ಯದೊಂದಿಗಷ್ಟೇ ನನ್ನಲ್ಲಿ ಉಳಿಯುತ್ತಾರೆ. ಜೊತೆಗೆ, ಅಕ್ಷರ ಮೀರಿ, ಅವರ ತಂಗಿಯ ದನಿಯು ಕಟ್ಟಿಕೊಟ್ಟ ಚಿತ್ರವಂತೂ ಒಬ್ಬ ಕಥೆಗಾರನಾಗಿ ನನ್ನಲ್ಲಿ ಸದಾ ಇರುತ್ತದೆ. ●